ರೂಪಾಯಿ ಮಾಡಿದರೆ ನಮ್ಮ ರಸ್ತೆಗಳಾಗಬಹುದು ಎಂಬ ಭರವಸೆ ಇದೆ. ಇದರ ಬಗ್ಗೆ ದಯಮಾಡಿ ನೋಡಿ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ೨ ಕೋಟಿ ೫೬ ರೂಪಾಯಿಗಳನ್ನು ಒಟ್ಟು ಪ್ಲಾನ್ ಹಾಗೂ ನಾನ್ ಪ್ಲಾನ್‌ನಲ್ಲಿ ಖರ್ಚು ಮಾಡುತ್ತೇವೆಂದು ಹೇಳಿದ್ದೇನೆ. ಇವತ್ತು ರಸ್ತೆಗಳು ಚೆನ್ನಾಗಿ ಇರಬೇಕೆಂದೂ ಅವನ್ನು ಚೆನ್ನಾಗಿ ಮಾಡಿ ಎಂದು ಕೇಳಬೇಕೇ ವಿನಃ ಪ್ಲಾನ್ ಮತ್ತು ನಾನ್ ಪ್ಲಾನ್ ಬಗ್ಗೆ ಕೇಳುವುದು ಏಕೆ ? ಇವತ್ತು ಪ್ಲಾನ್ ಆಗಲೀ, ನಾನ್ ಪ್ಲಾನ್‌ನಲ್ಲಾಗಲೀ ರಸ್ತೆ ಮಾಡಬೇಕಾಗುತ್ತದೆ. ಇವತ್ತು ೫ ವರ್ಷಗಳಲ್ಲಿನ ವರ್ಷವಾರು ಬ್ರೇಕ್‌ಅಪ್ ಕೇಳಿದ್ದಾರೆ. ಇವರು ಮೂಲ ಪ್ರಶ್ನೆಯಲ್ಲಿ ಇದನ್ನು ಕೇಳಿಲ್ಲ. ಇನ್ನು ಆ ಭಾಗದಲ್ಲಿ ಬ್ಲಾಕ್ ಕಾಟನ್ ಸಾಯಿಲ್ ಇರುವುದರಿಂದ ಅಲ್ಲಿನ ರಸ್ತೆಗಳಿಗೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆಂದು ನಾನು ಈ ಹಿಂದೆಯೇ ಹೇಳಿದ್ದೇನೆ ಸ್ಪೆಷಲ್ಲಾಗಿ ಈ ಬಗ್ಗೆ ನಾನ್ ಪ್ಲಾನ್‌ನಲ್ಲಿ ಎಷ್ಟು ಹೆಚ್ಚು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಬೇಕಾಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ, ಗುಲ್ಬರ್ಗಾ-ರಾಯಚೂರು ರಸ್ತೆಯೊಂದೇ ಅಲ್ಲ, ಇದು ಸುಮಾರಾಗಿ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟದ್ದಾಗಿದೆ. ಆದುದರಿಂದ ಈ ರಸ್ತೆಯನ್ನು ಈ ವರ್ಷವೇ ಮಂಗಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಮ್ಮ ಕಡೆ ರಸ್ತೆಗಳ ತೊಂದರೆ ಏನೂ ಎಂಬುದು ಮಾನ್ಯ ಮಂತ್ರಿಗಳಿಗೆ ಮನವರಿಕೆಯಾಗಿರುತ್ತದೆ. ವಿಶೇಷವಾಗಿ ಚಿತ್ತಾಪುರ್ ತಾಲ್ಲೂಕು, ಚಿತ್ತಾಪುರ್, ಸೇಡಂ ಯಾದ್ಗಿರ್‌ನ ಹೆಚ್ಚು ಭಾಗಗಳಲ್ಲಿ ಸಿಮೆಂಟ್ ಫ್ಯಾಕ್ಟರಿ ಇರುವುದರಿಂದ ಅಲ್ಲಿ ಸಾವಿರಾರು ಟ್ರಕ್ಸ್ ಹೋಗಿ ಬರುತ್ತದೆ. ಅವುಗಳ ಲೋಡ್‌ಗೆ ತಕ್ಕದಾಗಿ ರಸ್ತೆಗಳನ್ನು ಮಾಡಿಲ್ಲ. ಇವತ್ತು ತಮ್ಮಲ್ಲಿ ಡಿಸ್ಕ್ರಿಷನರಿ ಅಮೌಂಟ್ ಇದ್ದು ಅದನ್ನು ಉಪಯೋಗ ಮಾಡಿಕೊಂಡು ಈ ೪-೫ ತಾಲ್ಲೂಕುಗಳಿಗೆ ವಿಶೇಷ ಯೋಜನೆ ಮಾಡಿ ಸ್ಪೆಷಲ್ ಗ್ರಾಂಟ್ ಕೊಟ್ಟು ಈ ರಸ್ತೆಗಳನ್ನು ರಿಪೇರಿ ಮಾಡಿಸಂತ್ರೀರಾ ? ಇವತ್ತು ಮಹಾರಾಷ್ಟ್ರದ ಕಡೆಯಿಂದ ಬಂದವರು ನಮಗೆ ಬೈದುಹೋಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಸತ್ಯ ಇದೆ. ಸಿಮೆಂಟ್ ಫ್ಯಾಕ್ಟರಿ ಬಂದಮೇಲೆ ಈ ಭಾಗದ ಕೆಲವು ರಸ್ತೆಗಳಲ್ಲಿ ೧೪ ರಿಂದ ೧೮ ಟನ್‌ವರೆಗೆ ಭಾರ ಹೊತ್ತ ಟ್ರಕ್ ಓಡಾಡುತ್ತಿವೆ. ಹಿಂದೆ ಈ ರಸ್ತೆಗಳನ್ನು ೬ ರಿಂದ ೮ ಟನ್ ಕೆಪಾಸಿಟಿಗೆ ಡಿಸೈನ್ ಮಾಡಲಾಗಿತ್ತು. ಇಂತಹ ರಸ್ತೆಗಳ ಬಗ್ಗೆ ಇವತ್ತು ಸ್ವಲ್ಪ ಹೆಚ್ಚು ಹಣ ಕೊಡಬೇಕಾಗುತ್ತದೆ. ಇಂತಹ ರಸ್ತೆಗಳ ಮೇಲೆ ಭಾರದ ಟ್ರಕ್‌ಗಳು ಓಡಾಡಿದ ಮೇಲೆ ಬೇರೆಯವರು ಓಡಾಡುವುದು ಬಹಳ ಕಷ್ಟ ಇದೆ. ಇವತ್ತು ಇಷ್ಟೇ ಹೇಳುತ್ತೇನೆ, ಇದಕ್ಕೆ ಸ್ವಲ್ಪ ಹೆಚ್ಚು ಅನುದಾನ ಕೊಡಬೇಕಾಗುತ್ತದೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇವತ್ತು ಅಲ್ಲಿ ಒಂದೇ ಸಲ ಎಲ್ಲ ರಸ್ತೆಗಳನ್ನೂ ತೆಗೆದುಕೊಂಡು ರಿಪೇರಿ ಮಾಡಿಸುವುದಕ್ಕೆ ಹಣದ ತೊಂದರೆ ಇದೆಯೆಂಬುದು ತಮಗೆ ತಿಳಿದೇ ಇದೆ. ಆದರೆ ಇದಕ್ಕೆ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು ದುರಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳುತ್ತೇನೆ.

ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಯಂ ಅಚ್ಚುಕಟ್ಟಿನ ಬಗ್ಗೆ

೧೪೯೦. ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಲೋಕೋಪಯೋಗಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ತಾಲ್ಲೂಕು ಲಕ್ಕಾ ಹೋಬಳಿಯಲ್ಲಿರುವ ಬೆಳವಾಡಿ ಕೆರೆ ಕಳೆದ ಮೂರು ವರ್ಷಗಳಿಂದ ತುಂಬದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಲಿ ಈ ಕೆರೆಯ ಅಚ್ಚುಕಟ್ಟಿನಲ್ಲಿರುವ ಜಮೀನುಗಳ ವಿಸ್ತೀರ್ಣ ಎಷ್ಟು ?

ಇ) ಈ ಕೆರೆಯ ಅಚ್ಚುಕಟ್ಟಿನಲ್ಲಿರುವ ತೆಂಗಿನ ತೋಟ,ಅಡಿಕೆ ಬಾಗಾಯ್ತು ಒಣಗಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇಂಥ ತೊಂದರೆ ಅನುಭವಿಸುತ್ತಿರುವ ರೈತರಿಗೆ ಸರ್ಕಾರದವರು ಸಹಾಯಧನ ಕೊಡಲು ನಿರ್ಧರಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

ಅ) ಹೌದು.

ಆ) ೪೪೭ ಹಕ್ಕೇರುಗಳು;

ಇ) ಹೌದು.

ಈ) ಪರಿಶೀಲನೆಯಲ್ಲಿದೆ,

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಅಧ್ಯಕ್ಷರೇ, ಇವತ್ತು ಒಂದು ತೆಂಗಿನ ಹಾಗೂ ಅಡಿಕೆ ತೋಟ ಪನ್ನು ಬೆಳೆಸಬೇಕಾದರೆ ಒಬ್ಬ ರೈತ ೧೦ ರಿಂದ ೧೨ ವರ್ಷ ಕಟ್ಟ ಪಡಬೇಕಾಗುತ್ತದೆ. ಇವತ್ತು ಅಲ್ಲಿ ೪೪೭ ಹೆಕ್ಟೇರುಗಳಲ್ಲಿ ಬೆಳೆದಂತಹ ಅಡಿಕೆ ಹಾಗೂ ತೆಂಗಿನ ತೋಟ ಒಣಗಿ ಹೋಗಿದೆ. ಹಾಗೂ ಅಲ್ಲಿನ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಸರ್ಕಾರ ಪರಿಹಾರ ಕೊಡುವುದಕ್ಕೆ ಆಲೋಚನೆ ಮಾಡಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಇದು ಕೇವಲ ಚಿಕ್ಕಮಗಳೂರು ತಾಲ್ಲೂಕಿನ ಲಕ್ಕಾ ಹೋಬಳಿಯಲ್ಲಿರುವ ಬೆಳವಾಡಿ ಕೆರೆಯ ಸಮಸ್ಯೆಯಾಗಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಇವತ್ತಿನ ರಾಜ್ಯದಲ್ಲಿ ಬಹಳ ಕಡೆ ಇಂತಹ ಪರಿಸ್ಥಿತಿ ಇದೆ ಇವತ್ತು ಮಳೆ ಬಾರದೆ ಅಡಿಕೆ ಮತ್ತು ತೆಂಗಿನ ಫಸಲು ಸರಿಯಾಗಿ ಬರದಿದ್ದಾಗ ಆ ಬಗ್ಗೆ ಪರಿಹಾರ ಕೊಡಬೇಕೆನ್ನುವ ಪ್ರಶ್ನೆಯನ್ನು ಎತ್ತಿದ್ದಾರೆ. ಇಂತಹ ಹೆಚ್ಚಿನ ಸನ್ನಿವೇಶಗಳು ಬಂದಾಗ ಈ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ ಆದರೂ ಕೂಡ ನಾನು ಅವರ ಜೊತೆ ಮಾತನಾಡಿದಾಗ ಮರ ಒಣಗಿ ನಿಂತಿದ್ದರೆ ಅದನ್ನು ನೋಡಿಸುತ್ತೇನೆಂದೂ ಕೂಡಾ ಹೇಳಿದ್ದೇನೆ ಈ ಬಗ್ಗೆ ನಾನು ಮಾನ್ಯ ಸದಸ್ಯರ ಜೊತೆ ಕೂತು ಚರ್ಚೆ ಮಾಡುತ್ತೇನೆ.

ಬಾಲವಾಡಿ ಮತ್ತು ಅಂಗನವಾಡಿಗಳ ಮಂಜೂರಿ ಕುರಿತು

೧೫೦೮ ಶ್ರೀ ಆರ್. ರೋಶನ್ ಬೇಗ್.—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೨ ವರ್ಷಗಳಿಂದ ಮಂಜೂರಾಗಿರುವ ಬಾಲವಾಡಿಗಳು ಮತ್ತು ಅಂಗನವಾಡಿಗಳೆಷ್ಟು ಅವುಗಳಲ್ಲಿ ಮಂಜೂರಾದವರಿಗಾಗಿ ಎಷ್ಟು ?

ಆ) ಇದುವರೆಗೆ ಮುಸ್ಲಿಂ ಜನಾಂಗದ ಎಷ್ಟು ಜನ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ?

ಇ) ರಾಜ್ಯ ಸರ್ಕಾರದ ಸರ್ವೆ ಮಾಹಿತಿ ಆಧಾರದ ಮೇಲೆ ಅಂಗನವಾಡಿಗಳು ಮತ್ತು ಬಾಲವಾಡಿಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರವು ನಿರ್ಧಾರ ಕೈಗೊಳ್ಳುವುದು ಗಮನಕ್ಕೆ ಬಂದಿದೆಯೇ ?

ಈ) ಉರ್ದು ಮಾತನಾಡುವ ಜನರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಅಂಗನವಾಡಿ ಮತ್ತು ಬಾಲವಾಡಿಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಳೆದ ೨ ವರ್ಷಗಳಲ್ಲಿ ಯಾವುದೇ ಬಾಲವಾಡಿಗಳನ್ನು ಮಂಜೂರು ಮಾಡಲಾಗಿಲ್ಲ. ೧೯೮೫-೮೬ನೇ ಸಾಲಿನಲ್ಲಿ ಕೇಂದ್ರ ವತಿಯಿಂದ ಮಂಜೂರಾದ ೧೭ ಹೊಸ ಐ ಸಿ ಡಿ ಎಸ್ ಯೋಜನೆಗಳಲ್ಲಿ ೧೭೦೦ ಅಂಗನವಾಡಿ ಕೇಂದ್ರಗಳು ಮಂಜೂರು ಮಾಡಲಾಗಿದೆ ಹಾಲಿ ಕಾರ್ಯ ನಿರ್ವಹಿಸುತ್ತಿದ್ದ ೪೨ ಐ ಸಿ ಡಿ ಎಸ್ (ಕೇಂದ್ರ) ಯೋಜನೆಗಳಲ್ಲಿ ೧೯೮೪-೮೫ನೇ ಸಾಲಿಗೆ ವಿಸ್ತರಣಾ ಕಾರ್ಯಕ್ರಮ ಕೈಗೊಂಡ ಪ್ರಯುಕ್ತ ೪೮೧೫ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ, ಯಾವುದೇ ನಿರ್ದಿಷ್ಟ ತವಾದ ಸಮುದಾಯಕ್ಕೆ ಪ್ರತ್ಯೇಕವಾಗಿ ಅಂಗನವಾಡಿಗಳನ್ನು ಮಂಜೂರು ಮಾಡುವುದಿಲ್ಲ ಅಂಗನವಾಡಿ ಕೇಂದ್ರಗಳು ಸಮುದಾಯದ ಎಲ್ಲರಿಗೂ ತೆರೆದಿರುತ್ತವೆ.